ಸಿ.ಸಿ.ನಂ.3631/2023

ಸಿ.ಡಬ್ಲ್ಯೂ–1ಪಿ.ಡಬ್ಲ್ಯೂ–1

**ಸಾಕ್ಷಿಯನ್ನು ಇಂದು ದಿ.29.11.2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು ಶ್ರಿ.ಎಂ.ಎಸ್.ಎಚ್. ವಕೀಲರಿಂದಃ**

ನಾವು ಸ್ಯಾಂಪಲಗಾಗಿ ಎಲ್ಲ ಅಕ್ಕಿ ಚೀಲಗಳಿಂದ ಸ್ವಲ್ಪ ಸ್ವಲ್ಪ ಅಕ್ಕಿಯನ್ನು ತೆಗೆದುಕೊಂಡು ಒಂದೊಂದು ಕೆ.ಜಿ.ಯ ಎರಡು ಪ್ಯಾಕೇಟಗಳನ್ನು ತೆಗೆದುಕೊಂಡಿರುತ್ತೇವೆ. ನನ್ನ ಹೇಳಿಕೆಯಲ್ಲಿ ತಲಾ ಒಂದು ಚೀಲದಿಂದ ಒಂದೊಂದು ಕೆ.ಜ,ಿ. ಅಕ್ಕಿಯನ್ನು ಸ್ಯಾಂಪಲಗಾಗಿ ತೆಗೆದಿರುತ್ತೇವೆ ಎಂದು ಇರುತ್ತದೆ ಎಂದರೆ ಸಾಕ್ಷಿಯುಕೆಲವೊಂದು ಚೀಲಗಳಿಂದ ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಯಾವುದೇ ಘಟನೆ ನಡೆಯದಿದ್ದ ಕಾರಣ ನನ್ನ ಹೇಳಿಕೆ ಮತ್ತು ಮುಖ್ಯ ವಿಚಾರಣೆಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಾನು ಸದರಿ ಅಕ್ಕಿ ಪಡಿತರ ಅಕ್ಕಿ ಎಂದು ಸಾಬೀತುಪಡಿಸಲು ತಜ್ಞರ ಅಭಿಪ್ರಾಯ ಪಡೆದಿಲ್ಲ ಎಂದರೆ ಸರಿ. ನಾನು ನೀಡಿದ ಫಿರ್ಯಾದಿಗೆ ಅನುಕೂಲವಾಗಲು ಸದರಿ ಅಕ್ಕಿ ಪಡಿತರ ಅಕ್ಕಿ ಎಂದು ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಧಾನ್ಯಗಳ ಬಗ್ಗೆ ಹೇಳಲು ಪರಿಣಿತಿ ಇಲ್ಲ ಎಂದರೆ ಸಾಕ್ಷಿಯು ನನ್ನ ಕೆಲಸದ ಅನುಭವದ ಮೇಲೆ ಹೇಳುತ್ತೇನೆ ಎಂದು ನುಡಿಯುತ್ತಾರೆ.

ಚಾಸಾ-2, 3 ನಮ್ಮ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಾರೆ ಎಂದರೆ ಸರಿ. ಸದರಿಯವರು ಸಾಕಷ್ಟು ಪ್ರಕರಣಗಳಲ್ಲಿ ಪಂಚರಾಗಿರುತ್ತಾರೆ ಎಂದರೆ ಸರಿ. ನಾನು ಕೊಟ್ಟ ಸುಳ್ಳು ಫಿರ್ಯಾದಿಗೆ ಅನುಕೂಲವಾಗಲು ಅವರನ್ನೇ ಪಂಚರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಡಿತರ ಅಕ್ಕಿಯನ್ನು ಜನರಿಗೆ ಸರಬರಾಜು ಮಾಡದೇ ಮೋಸ ಮಾಡುವ ನೀವು ಯಾವುದಾದರೂ ಪ್ರಕರಣವನ್ನು ದಾಖಲಿಸಿದ್ದಿರಾ ಎಂದರೆ ಸಾಕ್ಷಿ ದಾಖಲಸಿದ್ದೇನೆ ಕೆಲವೊಬ್ಬರು ಅಮಾನತುಗೊಂಡಿದ್ದು ಮತ್ತು ಕೆಲವು ಪ್ರಕರಣಗಳು ಬೇರೆ ನ್ಯಾಯಾಲಯದಲ್ಲಿರುತ್ತವೆ ಎಂದು ನುಡಿಯುತ್ತಾರೆ. ಆರೋಪಿಯು ಯಾರ ಅಂಗಡಿಯಿಂದ ಅಕ್ಕಿಯನ್ನು ಖರೀದಿ ಮಾಡಿದ್ದಾನೆ ಎಂದು ತನಿಖೆ ಮಾಡಿದ್ದಿರಾ ಎಂದರೆ ಸಾಕ್ಷಿಯು ಆರೋಪಿಯು ಜನರಿಂದ ಅಕ್ಕಿಯನ್ನು ಖರೀದಿಸಿರ ುತ್ತಾನೆ ಎಂದು ನುಡಿಯುತ್ತಾರೆ. ಆರೋಪಿಯು ಜನರಿಂದ ಖರೀದಿ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ಆರೋಪಿ ಬಳಿ ಇದ್ದ 29 ಅಕ್ಕಿ ಚೀಲಗಳ ಛಾಯಚಿತ್ರವನ್ನು ತೆಗೆದಿರಬಹುದು. ನಾನು ಛಾಯಚಿತ್ರ ತೆಗೆಯದ ಕಾರಣ ಅದನ್ನು ಫಿರ್ಯಾದಿಯೊಂದಿಗೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಕ್ಕಿ ಚೀಲಗಳನ್ನು ತೂಕ ಮಾಡಿದ ವ್ಯಕ್ತಿ ಸರ್ಕಾರಿ ಗುತ್ತಿಗೆದಾರರು ಇರುತ್ತಾರೆ ಆದರೆ ನಮ್ಮ ಇಲಾಖೆಯವರು ಇರುವುದಿಲ್ಲ. ನಾನು ಸದರಿಯವರ ಜೊತೆ ಶಾಮೀಲಾಗಿ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಜಪ್ತಿಪಂಚನಾಮೆಯನ್ನು ಪೋಲಿಸ ಅಧಿಕಾರಿಗಳು ಮತ್ತು ನಮ್ಮ ಆಪರೇಟರ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಮಾದನ ಹಿಪ್ಪರಗಾ ಪೋಲಿಸ ಠಾಣೆಯಲ್ಲಿ ಮಾಡಿರುತ್ತಾರೆ. ಯಾವುದೇ ಘಟನೆ ನಡಯದಿದ್ದರೂ ಪೋಲಿಸರೊಂದಿಗೆ ಸೇರಿಕೊಂಡು ಸುಳ್ಳು ಪಂಚನಾಮೆ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಗೋದಾಮಿನ ರಜಿಸ್ಟರ ದಾಖಲೆಯ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ ಆದರೆ ರಸೀದಿಯನ್ನು ಹಾಜರುಪಡಿಸಿರುತ್ತೇನೆ ಸಾಕ್ಷಿ ಮುಂದುವರೆದು ಬೇಕಾದರೆ ರಜಿಸ್ಟರ ದಾಖಲೆಯ ಪ್ರತಿಯನ್ನು

ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಯಾವುದೇ ರಜಿಸ್ಟರ ದಾಖಲೆ ಇಲ್ಲದ ಕಾರಣ ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಗೋದಾಮಿನಲ್ಲಿ ಮಾಲನ್ನು ಇಡುವಾಗ ಛಾಯಚಿತ್ರವನ್ನು ತೆಗೆದು ಸಲ್ಲಿಸಿರುವುದಿಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹಿತ ನಾನು ಗೋದಾಮಿನ ಅಧಿಕಾರಿಗಳೊಂದಿಗೆ ಶಾಮಿಲಾಗಿ ಪಡಿತರ ಅಕ್ಕಿಯನ್ನು ನಾನೇ ಕಳ್ಳತನ ಮಾಡಿ ಅದು ಕಡಿಮೆ ಬೀಳುತ್ತದೆ ಎಂದು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿ: 07.01.2023 ರಂದು ತಹಶೀಲ ಕಛೇರಿಯಲ್ಲಿ ಕಾರ್ಯ ನಿರ್ವಹಿಸುವಾಗ ಮಾದನ ಹಿಪ್ಪರಗಾ ಪೋಲಿಸ ಠಾಣೆಯಿಂದ ಒಬ್ಬ ಪೋಲಿಸ ಸಿಬ್ಬಂದಿ ಒಂದು ಪತ್ರ ಪಡೆದುಕೊಂಡು ಬಂದಿದ್ದು. ಅವರು ದಸ್ತು ಕರ್ತವ್ಯದಲ್ಲಿ ಇದ್ದಾಗ ಒಂದ ವಾಹನದ ಸಂ: ಎಂ,ಎಚ್.13 ಡಿ.ಕ್ಯೂ.4073 ವಾಹನದಲ್ಲಿ ಅಕ್ರಮವಾಗಿ ಪಡಿತರ ಚೀಟಿಯ ಅಕ್ಕಿಯನ್ನು ಸಾಗಾಣಿಕೆ ಮಾಡಿತ್ತಿದ್ದು ಅದನ್ನು ಹಿಡಿದು ಪೋಲಿಸ ಠಾಣೆಯಲ್ಲಿ ನಿಲ್ಲಿಸಿದ್ದು ಅದನ್ನು ಪರಿಶೀಲಿಸಿ ನಮಗೆ ವರದಿ ಸಲ್ಲಿಸುವಂತೆ ಅರ್ಜಿ ನೀಡಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ನಾವು ನಮ್ಮ ತಹಶೀಲ್ದಾರವರಿಗೆ ಮೌಖಿಕವಾಗಿ ತಿಳಿಸಿ ನಾನು ಹಾಗೂ ಚಾಸಾ-೪ ರವರು ಇಬ್ಬರು ಕೊಡಿಜಕೊಂಡು ಹೋದೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಒಂದು ಟಾಟಾ ಎಸ್ ವಾಹನ ತೋರಿಸಿ ಪೋಲಿಸರು ವರದಿ ನೀಡುವಂತೆ ಕೋರಿದರು ಅದರಂತೆ ನಾನು ಸುಮಾರು ೮೦೦ ಚೀಲಗಳ ಪರಿಶೀಲನೆ ಮಾಡಿ ಅದರಲ್ಲಿರುವುದು ಪಡಿತರ ಚೀಟಿಯ ಅಕ್ಕಿಗಳು ಎಂದು ಖಚಿತವಾಯತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಸ್ಥಳಿಯರಿಗೆ ಪಂಚರಾಗಲು ಕೋರಿಕೊಂಡಾಗ ಅವರು ಒಪ್ಪಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಛೇರಿಯವರಾದ ಚಾಸಾ-೨-೩ ರವರನ್ನು ಕರೆಮುಖಾಂತರ ಕರೆಸಿದೆವು. ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ ಅಕ್ಕಿಯನ್ನು ಅಳಂದ ತಾಲೂಕಿನ ಬುಕ್ಕೆ ವೇ ಬ್ರಜ್ ನಲ್ಲಿ ತೂಕ ಮಾಡಿಸಿ, ೩೩೨೦ ಕೆಜಿ ಎಂದು ಕಂಡು ಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ನಮ್ಮ ಪಡಿತರ ಚೀಟಿಯ ಗೂಡ್ವಾನಗೆ ತೆಗೆದುಕೊಂಡು ಬಂದು ವ್ಯವಸ್ತಾಪಕರಿಗೆ ಹಸ್ತಾಂತರ ಮಾಡಿದೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ೨೯ ಪ್ಯಾಸ್ಟೀಕ್ ಚೀಲಗಳನ್ನು ವ್ಯವಸ್ಥಾಪಕರಿಗೆ ನೀಡಿ ರಸೀದಿ ಪಡೆದವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ ಕಾಲಿವಾಹನವನ್ನು ತೂಕ ಮಾಡಿಸಿ ಅದು ೧೭೪೦ ಕೆಜಿ ಎಂದು ಕಂಡು ಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಡಿತರ ಅಕ್ಕಿ ಕೆ.ಜಿ ೧೫೮೦ ಎಂದು ಕಂಡು ಬಂದಿರುತ್ತದೆ. ಅದರ ಮೌಲ್ಯ ೩೯,೫೦೦/- ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿಂದ ಮತ್ತೆ ಮಾದನ ಹಿಪ್ಪರಗಾ ಠಾಣೆಗೆ ಹೋಗಿ ಪಂಚನಾಮೆ ಮಾಡಿ ದೂರನ್ನು ನೀಡಿದೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

अपर सिविल् न्यायाधीशरु मत्तु
जे.एं.एफ्.सि. आळंद.